ಮೈಸೂರಿನ ಕುವೆಂಪು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು.

೧೪೪೬(೧೭೫೯)

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಮೈಸೂರಿನ ಕುವೆಂಪು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಜಾಗ ಮಂಜೂರು ಮಾಡಬೇಕೆಂದು ಕಳುಹಿಸಿದ್ದ ಪ್ರಸ್ತಾವನೆ ಯಾವ ಹಂತದಲ್ಲಿದೆ;

೨. ಈ ಕಾಲೇಜಿಗೆ ಸ್ವಂತ ಜಾಗ ಮಂಜೂರು ಮಾಡಿಸಿಕೊಂಡು ಸ್ವಂತ ಕಟ್ಟಡ ಹೊಂದಲು ಬೇಕಾಗುವ ಅಂದಾಜು ಮೊತ್ತವೆಷ್ಟು;

೩. ಈ ಕಾಲೇಜಿಗೆ ಸ್ವಂತ ನಿವೇಶನ:ಕಟ್ಟಡ ಕೂಡಲೇ ಮಂಜೂರು ಮಾಡಲಾಗುವುದೇ?

ಡಾ: ಜಿ.ಪರಮೇಶ್ವರ್: (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು):

೧. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಾಣಿಜ್ಯ ಸಂಕೀರ್ಣದ ಕಟ್ಟಡದ ಹಿಂಭಾಗದಲ್ಲಿರುವ ಖಾಲಿ ನಿವೇಶನವನ್ನು ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ವರ್ಗಾಯಿಸಿ ಕೊಡಬೇಕೆಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರನ್ನು ಕೋರಲಾಗಿದೆ.

೨. ಸುಮಾರು ರೂ. ೪೦.೦೦ ಲಕ್ಷಗಳು ಬೇಕಾಗಿರುತ್ತದೆ.

೩. ಸರ್ಕಾರವು ಈ ವಿಷಯವನ್ನು ತ್ವರಿತವಾಗಿ ಅನುಸರಿಸುವುದು.

ಮೈಸೂರಿನ ಕೃಷ್ಣ ರಾಜೇಂದ್ರ ಮತ್ತು ಚೆಲುವಾಂಬ ಆಸ್ಪತ್ರೆಗಳ ಸಮಸ್ಯೆ.

೧೪೪೭(೧೭೪೦)

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ಕೃಷ್ಣರಾಜೇಂದ್ರ ಮತ್ತು ಚೆಲುವಾಂಬ ಆಸ್ಪತ್ರೆಗಳು